Prajavani Page - 03 20/12/2016.

ಹೊಸ ಹೆಜ್ಜೆ 32

# ವಿದ್ಯುತ್ ಸಮಸ್ಯೆ ನೀಗುವ ಯಂತ್ರ



ಗಾಳಿಯಿಂದ ನೀರನ್ನು ಮೇಲಕ್ಕೆತ್ತುವ ಯಂತ್ರ

ಗುರು ಪಿ.ಎಸ್.

ಬಾವಿ, ಕೆರೆ ಅಥವಾ ಕೊಳವೆಬಾವಿಗಳಿಂದ ಹೊಲಗಳಿಗೆ ನೀರು ಹಾಯಿಸುವುದು ರೈತರಿಗೆ ದೊಡ್ಡ ಸವಾಲು. ಆಗಾಗ ಕೈಕೊಡುವ ವಿದ್ಯುತ್, ವೋಲ್ಟೇಜ್ ಕಡಿಮೆ ಇದ್ದರೆ, ವಿದ್ಯುತ್ ಸಂಪರ್ಕ ಇದ್ದರೂ ಇಲ್ಲದಂತಹ ಸ್ಥಿತಿ. ಇನ್ನು, ಡೀಸೆಲ್ ಜನರೇಟರ್‌ಗಳಿಗೆ ತಾಸಿಗಿಷ್ಟು ಎಂದು ದುಡ್ಡು ಸುರಿಯಬೇಕು. ಎಲ್ಲದಕ್ಕಿಂತ ಹೆಚ್ಚಾಗಿ ಇದನ್ನೆಲ್ಲ ನಿರ್ವಹಿಸಲು ಒಬ್ಬ ವ್ಯಕ್ತಿ ಇರಲೇಬೇಕು.

ಈ ಎಲ್ಲ ಸಮಸ್ಯೆ ನೀಗಲು ನೈಸರ್ಗಿಕವಾಗಿ ಸುಲಭವಾದ ಮಾರ್ಗವೊಂದನ್ನು ಹುಬ್ಬಳ್ಳಿಯ ಎಂಜಿನಿಯರ್ ಸದಾನಂದ ಹೊಳೆಯಣ್ಣವರ ಕಂಡುಕೊಂಡಿದ್ದಾರೆ. ಪವನ ಶಕ್ತಿಯನ್ನು ಬಳಸಿಕೊಂಡು ನೀರನ್ನು ಮೇಲೆತ್ತುವ ಯಂತ್ರವನ್ನು ಅವರು ಅಭಿವೃದ್ಧಿಪಡಿಸಿದ್ದಾರೆ. ಬಾವಿ, ಕೆರೆ, ಹೊಂಡದಿಂದ 300 ಅಡಿ ಆಳದವರೆಗಿನ ನೀರನ್ನು ಈ ಯಂತ್ರ ಮೇಲಕ್ಕೆತ್ತುತ್ತದೆ.

## ಕಡಿಮೆ ವೆಚ್ಚ, ದೀರ್ಘ ಬಾಳಿಕೆ

ಹುಬ್ಬಳ್ಳಿಯಲ್ಲಿ ಸಿಗುವ ಕಚ್ಚಾವಸ್ತುಗಳನ್ನೇ ಬಳಸಿಕೊಂಡು ಈ ಯಂತ್ರವನ್ನು ಸದಾನಂದ ಅಭಿವೃದ್ಧಿಪಡಿಸಿದ್ದಾರೆ. ಈ ಯಂತ್ರ ಖರೀದಿಗೆ ₹1.50 ಲಕ್ಷ ವೆಚ್ಚ ಮಾಡಬೇಕಾಗುತ್ತದೆ. ಇದರಲ್ಲಿ ಅಳವಡಿಕೆಯ ಶುಲ್ಕವೂ ಸೇರಿದೆ. 100 ಅಡಿ ಎತ್ತರದವರೆಗೂ ಈ ಯಂತ್ರವನ್ನು ಅಳವಡಿಸಬಹುದಾದರೂ, ಸರಾಸರಿ ವೇಗದ ಗಾಳಿಗೆ 25 ಅಡಿ ಎತ್ತರದವರೆಗೆ ಅಳವಡಿಸಿದರೂ ಸಾಕು. ಗಾಳಿ ಇದ್ದರೆ ನಿರಂತರವಾಗಿ ನೀರನ್ನು ಈ ಯಂತ್ರವು ಎತ್ತುತ್ತಿರುತ್ತದೆ. ಗಾಳಿಯ ವೇಗ ಗಂಟೆಗೆ 67 ಕಿ.ಮೀ. ವೇಗದಲ್ಲಿದ್ದರೆ, ದಿನಕ್ಕೆ 25 ಸಾವಿರ ಲೀಟರ್ ನೀರನ್ನು ಈ ಯಂತ್ರವು ಮೇಲಕ್ಕೆ ಎತ್ತುತ್ತದೆ. ಗಾಳಿಯ ವೇಗ ಜಾಸ್ತಿಯಾದಂತೆ, ಮೇಲಕ್ಕೆತ್ತುವ ನೀರಿನ ಪ್ರಮಾಣವೂ ಜಾಸ್ತಿಯಾಗುತ್ತದೆ. ಸುಮಾರು 25 ವರ್ಷಗಳಿಗೂ ಹೆಚ್ಚು ಕಾಲ ಈ ಯಂತ್ರ ಬಾಳಿಕೆಗೆ ಬರುತ್ತದೆ.

'ಯುರೋಪಿಯನ್ ರಾಷ್ಟ್ರಗಳಲ್ಲಿ ಈ ಮಾದರಿಯ ಯಂತ್ರದ ಬಳಕೆ ಹೆಚ್ಚಾಗಿದೆ. ದೇಶದಲ್ಲಿ ಕಡಿಮೆ ಪ್ರಮಾಣದಲ್ಲಿದೆ. ಶಿವಮೊಗ್ಗದಿಂದ 10 ಕಿ.ಮೀ. ದೂರದಲ್ಲಿದ್ದ ಹಳ್ಳಿಯೊಂದರಲ್ಲಿ ಸರ್ಕಾರವೇ ಇಂತಹ ಯಂತ್ರವನ್ನು ಅಳವಡಿಸಿದ್ದನ್ನು ನೋಡಿದ್ದೆ. ಬಾವಿ ಅಥವಾ ಕೆರೆಯಿಂದ ನೀರನ್ನು ಎತ್ತಿ ಹಳ್ಳಿಗೆ ಅದನ್ನು ಪೂರೈಸುವ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಆ ಯಂತ್ರ ಕೆಲಸ ಸ್ಥಗಿತಗೊಳಿಸಿತ್ತು. ನಾನು ಇಂತಹ ಯಂತ್ರ ಅಭಿವೃದ್ಧಿಪಡಿಸಬೇಕು ಎನಿಸಿತು. ಹುಬ್ಬಳ್ಳಿಯಲ್ಲಿ ಸಿಗುವ ಕಚ್ಚಾ ವಸ್ತುಗಳನ್ನು ಬಳಸಿ ಈ ಯಂತ್ರವನ್ನು ಅಭಿವೃದ್ಧಿಪಡಿಸಿದ್ದೇನೆ' ಎನ್ನುತ್ತಾರೆ ಸದಾನಂದ ಹೊಳೆಣ್ಣವರ.

ಯಂತ್ರಕ್ಕೆ ಬೇಡಿಕೆ ಬಂದರೆ, 30 ದಿನದೊಳಗೆ ಅದನ್ನು ಪೂರೈಸುತ್ತೇನೆ. ಇದನ್ನು ನಾನು ಇನ್ನೂ ನೋಂದಣಿ ಮಾಡಿಸಿಲ್ಲ. ಆಸಕ್ತರು ಈ ಮಾದರಿಯನ್ನು ಒಮ್ಮೆ ನೋಡಿದರೆ, ಅವರೇ ಅಭಿವೃದ್ಧಿಪಡಿಸಬಹುದು. ಅಷ್ಟು ಸರಳವಾಗಿದೆ ಎಂದು ಅವರು ಹೇಳಿದರು.

ನವೀಕರಿಸಬಹುದಾದ ಶಕ್ತಿ ಮೂಲವನ್ನು ಬಳಸಿಕೊಂಡು ಯಾವುದಾದರೂ ಉಪಕರಣ ಅಭಿವೃದ್ಧಿಪಡಿಸಬೇಕು ಎಂದುಕೊಂಡಾಗ ಈ ಉಪಾಯ ನನಗೆ ಹೊಳೆಯಿತು. ಪ್ರಕೃತಿಯಲ್ಲಿ ಉಚಿತವಾಗಿ ಸಿಗುವ ಗಾಳಿಯನ್ನು ಬಳಸಿಕೊಂಡು ನೀರನ್ನು ಮೇಲಕ್ಕೆತ್ತಬಹುದು. ರೈತರು ಡೀಸೆಲ್ ಜನರೇಟರ್ ಬಳಸಲು ಮೂರು ತಾಸಿಗೆ ₹500 ವ್ಯಯಿಸಬೇಕಾಗುತ್ತದೆ. ಅಲ್ಲದೆ, ಜನರೇಟರ್ ಚಾಲನೆಗೊಳಿಸಲು, ನೀರೆತ್ತುವ ಪ್ರಕ್ರಿಯೆ ನಿರ್ವಹಿಸಲು ಒಬ್ಬ ವ್ಯಕ್ತಿ ಇರಲೇಬೇಕಾಗುತ್ತದೆ. ಆದರೆ, ಈ ಯಂತ್ರ ಬಳಸಲು ಯಾವ ನಿರ್ವಹಣೆಯೂ ಬೇಕಾಗುವುದಿಲ್ಲ. ಬೇಡವಾದಾಗ, ಯಂತ್ರವನ್ನು ಸ್ಥಗಿತಗೊಳಿಸಬಹುದು ಎಂದು ಅವರು ಹೇಳಿದರು.

ಸಾಮಾನ್ಯವಾಗಿ ಈ ಯಂತ್ರ ಅಳವಡಿಸಲು 6x6 ಅಡಿ ಜಾಗ ಬೇಕಾಗುತ್ತದೆ. ಇನ್ನು, ಬಾವಿ ಮೇಲೆ ಈ ಯಂತ್ರ ಅಳವಡಿಸಬೇಕೆಂದರೆ, ಬಾವಿ ಎಷ್ಟು ಅಗಲ ಇರುತ್ತದೋ ಅಷ್ಟು ವಿಸ್ತಾರದ ಜಾಗದಲ್ಲಿ ಯಂತ್ರ ಹಾಕಬೇಕು. ಕೈ ಪಂಪ್ ರೀತಿಯಲ್ಲಿ ಈ ಯಂತ್ರ ಕಾರ್ಯನಿರ್ವಹಿಸುತ್ತದೆ ಎಂದು ಅವರು ತಿಳಿಸಿದರು. ❖

ಚಿತ್ರಗಳು–ತಾಜುದ್ದೀನ್ ಆಜಾದ್



# ಶಿಥಿಲಗೊಂಡಿದ್ದ ವಿದ್ಯುತ್ ಕಂಬ ಬದಲಾವಣೆ

## ನಾಗರಿಕರ ಸಮಸ್ಯೆಗೆ ಸ್ಪಂದಿಸಿದ ಉತ್ತರಹಳ್ಳಿ ಕಾರ್ಪೋರೇಟರ್ ಹನುಮಂತಯ್ಯ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಉತ್ತರಹಳ್ಳಿ ವಾರ್ಡ್‌ನ ಕಾರ್ಪೋರೇಟರ್ ಹನುಮಂತಯ್ಯ ನೀಡಿದ್ದ ಸೂಚನೆ ಮೇರೆಗೆ ವಾರ್ಡ್‌ನ ವಿವಿಧೆಡೆ ಶಿಥಿಲಗೊಂಡಿದ್ದ ವಿದ್ಯುತ್ ಕಂಬಗಳನ್ನು ಬೆಸ್ಕಾಂ ಅಧಿಕಾರಿಗಳು ಬದಲಿಸಿದ್ದಾರೆ. ಕಂಬ ಬಿದ್ದು ಅಪಾಯವುಂಟಾಗುವ ಭೀತಿಯಲ್ಲಿದ್ದ ಜನ ಸಮಾಧಾನದ ನಿಟ್ಟುಸಿರು ಬಿಟ್ಟರು.



ಉತ್ತರಹಳ್ಳಿ ವಾರ್ಡ್‌ನ ಅರೇಹಳ್ಳಿ ಬಡಾವಣೆಯಲ್ಲಿ ಸ್ಥಳೀಯ ನಾಗರಿಕರಿಂದ ಸಮಸ್ಯೆ ಆಲಿಸುತ್ತಿರುವ ಕಾರ್ಪೋರೇಟರ್ ಹನುಮಂತಯ್ಯ.

**ವಿಜಯವಾಣಿ ಸಹಾಯವಾಣಿ**

ಸಾರ್ವಜನಿಕ ಹಿತಾಸಕ್ತಿಯ ಸಮಸ್ಯೆಗಳಿದ್ದಲ್ಲಿ ನೀವೂ ಕರೆ ಮಾಡಿ ಇಲ್ಲ SMS ಮಾಡಿ

ಫೋನ್/ವಾಟ್ಸ್ ಆ್ಯಪ್: 88844 32666

ಇ-ಮೇಲ್: wardvijaya@gmail.com

ವಾರ್ಡ್‌ನಾದ್ಯಂತ ಸಂಚರಿಸಿ ಮೂಲಸೌಕರ್ಯ ಸಮಸ್ಯೆಗಳನ್ನು ಖುದ್ದಾಗಿ ಪರಿಶೀಲಿಸುವ ಜತೆಗೆ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ ಸಮಸ್ಯೆಗಳನ್ನು ಪರಿಹರಿಸಲು ಹನುಮಂತಯ್ಯ ಭಾನುವಾರ ವಾರ್ಡ್ ಸಂಚಾರ ಕೈಗೊಂಡಿದ್ದರು. ವಿಜಯವಾಣಿ ಸಹಾಯವಾಣಿಗೆ ಕರೆ ಮಾಡಿದ್ದ ನಾರಾಯಣಪ್ಪ ಬಡಾವಣೆಯ ನಿವಾಸಿಗಳು ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬ ಬಗ್ಗೆ ಗಮನ ಸೆಳೆದಿದ್ದರು. ಸ್ಥಳಕ್ಕೆ ಭೇಟಿ ನೀಡಿದ ಹನುಮಂತಯ್ಯ, ಕಂಬದ ಸ್ಥಿತಿಯನ್ನು ಗಮನಿಸಿ, ತಕ್ಷಣವೇ ಅದನ್ನು ಬದಲಿಸುವಂತೆ ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದ್ದರು. ಅದರಂತೆ ಬೆಸ್ಕಾಂ ಅಧಿಕಾರಿಗಳು ಸೋಮವಾರ ಬೆಳಗ್ಗೆ ವೇಳೆಗೆ ಕಂಬವನ್ನು ಬದಲಿಸಿದರು.

**ಇತರೆ ಬಡಾವಣೆಗಳಿಗೂ ಭೇಟಿ:** ಅರೆಹಳ್ಳಿ ಬಡಾವಣೆ ಸೇರಿ ವಾರ್ಡ್‌ನ ಇನ್ನಿತರ ಬಡಾವಣೆಗಳಿಗೆ ತೆರಳಿದ ಹನುಮಂತಯ್ಯ, ಅಲ್ಲಿನ ಮೂಲ ಸೌಕರ್ಯಗಳ ಸಮಸ್ಯೆಗಳನ್ನು ಪರಿಶೀಲಿಸಿದರು.

ನಂತರ ವಿಜಯವಾಣಿ ಜತೆ ಮಾತನಾಡಿ, ವಿಜಯವಾಣಿ ಸಹಾಯವಾಣಿಯಿಂದಾಗಿ ತುಂಬ ಅನುಕೂಲವಾಗುತ್ತಿದೆ. ತಕ್ಷಣಕ್ಕೆ ನಮ್ಮ ಗಮನಕ್ಕೆ ಬಾರದಂಥ ಹಲವು ಸಮಸ್ಯೆಗಳು ಗಮನಕ್ಕೆ ಬರುತ್ತಿವೆ. ಈ ಹಿನ್ನೆಲೆಯಲ್ಲಿ ವಾರ್ಡ್ ಸಂಚಾರ ಕೈಗೊಂಡಿದ್ದೆ. ಸದ್ಯ ವಾರ್ಡ್‌ನ ಅನೇಕ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಸಣ್ಣ ರಸ್ತೆಗಳನ್ನು ಕಾಂಕ್ರೀಟ್ ರಸ್ತೆಗಳಾಗಿ ಪರಿವರ್ತಿಸಲಾಗುತ್ತಿದೆ. ಡಾಂಬರೀಕರಣ ಕಾಮಗಾರಿ ಶೀಘ್ರದಲ್ಲೇ ಆರಂಭವಾಗಲಿದೆ ಎಂದರು.

---

20.12.16

# ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿಗಾಹುತಿಯಾದ ಮನೆ

**ಹಳಿಯಾಳ (ಉತ್ತರ ಕನ್ನಡ):** ಪಟ್ಟಣದ ಗೌಳಿಗಲ್ಲಿಯ ಬಸವರಾಜ ಭೀಮಾಜಿ ಗೌಳಿ ಅವರ ಮನೆ ಸೋಮವಾರ ಬೆಳಗ್ಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿಗಾಹುತಿಯಾಗಿದೆ. ಮನೆಯಲ್ಲಿ ಮದುವೆಗಾಗಿ ತಯಾರಿ ನಡೆದಿತ್ತು. ಅದಕ್ಕಾಗಿ ಕಷ್ಟಪಟ್ಟು ಸಂಪಾದಿಸಿದ ಹಣದಿಂದ ಆಭರಣ, ಬೆಳ್ಳಿ ಸಾಮಗ್ರಿ, ಹೊಸ ಬಟ್ಟೆಗಳನ್ನು ಜೋಡಿಸಿಟ್ಟಿದ್ದರು. ಆದರೆ, ವಿಧಿಯ ವಿಪರ್ಯಾಸವೆಂಬಂತೆ ಇವೆಲ್ಲ ಸುಟ್ಟು ಕರಕಲಾಗಿದೆ.

**» ಮದುವೆಗಾಗಿ ತಂದಿದ್ದ ಬಂಗಾರ, ಬೆಳ್ಳಿ ಆಭರಣಗಳು ಭಸ್ಮ**

ಮುಂದಿನ ತಿಂಗಳು ಬಸವರಾಜ ಗೌಳಿ ಅವರ ತಂಗಿಯ ಮಗಳ ಮದುವೆ ನಿಶ್ಚಯವಾಗಿತ್ತು. ಈ ಶುಭ ಕಾರ್ಯಕ್ಕಾಗಿ ತಂದಿಟ್ಟಿದ್ದ 2 ಲಕ್ಷ ರೂ.ಗಿಂತ ಹೆಚ್ಚು ನಗದು ಹಣ ಸುಟ್ಟು ಭಸ್ಮವಾಗಿದೆ. ಅನಾಹುತದಿಂದ ಅಂದಾಜು ನಾಲ್ಕು ಲಕ್ಷ ರೂ.ಗೂ ಅಧಿಕ ಹಾನಿ ಸಂಭವಿಸಿದೆ. ಘಟನಾ ಸ್ಥಳಕ್ಕೆ ಕಂದಾಯ ಇಲಾಖೆ, ಹೆಸ್ಕಾಂ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

---

20.12.16

# ಬಾಕಿ ಶಾಕ್!

ಗ್ರಾಮ ಪಂಚಾಯಿತಿಗಳು ಭಾರಿ ಮೊತ್ತದ ವಿದ್ಯುತ್ ಬಿಲ್ ಉಳಿಸಿಕೊಂಡಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಇದನ್ನು ವಸೂಲಿ ಮಾಡಲು ರಾಜ್ಯ ಸರಕಾರ, ಗ್ರಾ.ಪಂ.ಗಳಿಗೆ 13 ಮತ್ತು 14ನೇ ಹಣಕಾಸು ಆಯೋಗದ ಹಣ ಬಿಡುಗಡೆ ಮಾಡುವಾಗ ಶೇ.10 ಕಡಿತ ಮಾಡಿ ಅದನ್ನು ನೇರವಾಗಿ ಎಸ್ಕಾಂ ಗಳಿಗೆ ಪಾವತಿ ಮಾಡುತ್ತಿದೆ. ಆದರೆ ಈ ರೀತಿ ಪಾವತಿ ಮಾಡುವಾಗ ಸಕಾಲದಲ್ಲಿ ಬಿಲ್ ಪಾವತಿ ಮಾಡಿ ಯಾವುದೇ ಬಾಕಿ ಇರಿಸದ ಗ್ರಾ.ಪಂ.ಗಳಿಗೂ ಅನುದಾನದಿಂದ ಶೇ.10 ಕಡಿತಗೊಳಿಸಿ ಎಸ್ಕಾಂಗಳಿಗೆ ಪಾವತಿ ಮಾಡುತ್ತಿದೆ.

ಹಾಗಾಗಿ ಪ್ರಾಮಾಣಿಕ ಪಂಚಾಯಿತಿಗಳು ಅಭಿವೃದ್ಧಿ ಕಾರ್ಯಗಳಿಗೆ ಹಣಕಾಸು ಕೊರತೆಯಿಂದ ಚಡಪಡಿಸುತ್ತಿವೆ. ಉದಾಹರಣೆಗೆ ಅತಿ ಚಿಕ್ಕ ಪಂಚಾಯಿತಿ ಕಾರ್ಕಳ ತಾಲೂಕಿನ ದುರ್ಗ ಗ್ರಾ.ಪಂ.ಗೆ 5 ಲಕ್ಷ ರೂ. ಗಿಂತ ಹೆಚ್ಚು ಹಣವನ್ನು ಮೆಸ್ಕಾಂಗೆ ಪಾವತಿ ಮಾಡಲಾಗಿದೆ.

ಒಂದು ನಯಾಪೈಸೆ ಬಾಕಿ ಉಳಿಸಿಕೊಳ್ಳದಿದ್ದರೂ ನಮಗೇಕೆ ಇಂಥ ಶಿಕ್ಷೆ? ರಾಜ್ಯ ಸರಕಾರ ಬಾಕಿ ಇಲ್ಲದ ಗ್ರಾ.ಪಂ.ಗಳ ಅನುದಾನ ಕಡಿತ ನಿಲ್ಲಿಸಿ ಕಡಿತಗೊಂಡ ಮೊತ್ತವನ್ನು ಗ್ರಾ.ಪಂ.ಗಳಿಗೆ

---

20.12.16

# ವಿದ್ಯುತ್ ಕೇಂದ್ರದಲ್ಲಿ ದೋಷ: ನಗರ ಕಾರ್ಗತ್ತಲು

**ಬೆಂಗಳೂರು:** 220 ಕೆವಿ ಸಾಮರ್ಥ್ಯದ ಮುಖ್ಯ ವಿದ್ಯುತ್ ಕೇಂದ್ರದಲ್ಲಿ ತಾಂತ್ರಿಕ ದೋಷ ಉಂಟಾಗಿದ್ದರಿಂದ ನಗರದ ಬಹುತೇಕ ಭಾಗ ಸೋಮವಾರ ರಾತ್ರಿ ಕತ್ತಲಲ್ಲಿ ಮುಳುಗಿತ್ತು. ಈ ಕೇಂದ್ರದ ವ್ಯಾಪ್ತಿಗೆ ಎಂಟು ಉಪಕೇಂದ್ರಗಳು ಬರುತ್ತವೆ. ಈ ವ್ಯಾಪ್ತಿಯಲ್ಲಿ ದಿಢೀರ್ ವಿದ್ಯುತ್ ಕಡಿತಗೊಂಡ ಕಾರಣ ಜನ ತೀವ್ರ ಪರದಾಟ ಅನುಭವಿಸಿದರು. ನಗರದ ರಾಜಾಜಿನಗರ, ವಸಂತನಗರ, ಕಾಟನ್‌ಪೇಟೆ, ಯಶವಂತಪುರ, ಮೆಜೆಸ್ಟಿಕ್ ಸೇರಿದಂತೆ ಬಹುತೇಕ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿತ್ತು.

---

# 'ಶಾಲೆಗಳಿಗೆ ಶೌಚಾಲಯ'

'ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ಮಿಸಿ ಸಮರ್ಪಕವಾಗಿ ನಿರ್ವಹಣೆ ಮಾಡುವುದಾದರೆ ಶೌಚಾಲಯ, ಕೊಳವೆ ಬಾವಿ, ಟ್ಯಾಂಕ್ ನಿರ್ಮಾಣದ ಎಲ್ಲ ಖರ್ಚನ್ನು ನಾವು ಭರಿಸುತ್ತೇವೆ. ಆದರೆ, ಅದು ಫಲಪ್ರದ ಆಗಬೇಕು. ಸಮರ್ಪಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳಲ್ಲಿ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಬೇಕು. ಈ ನಿಟ್ಟಿನಲ್ಲಿ ಎಸ್‌ಕೆಡಿಆರ್‌ಡಿಪಿ ಸಹಕಾರದ ಜೊತೆ ಯೋಜನೆ ಜಾರಿಗೊಳಿಸಲು ಸಿದ್ಧ' ಎಂದು ಸುಧಾಮೂರ್ತಿ ಹೇಳಿದರು. 'ಅಲ್ಲದೇ, ಜಿಲ್ಲೆಯ ಸುಮಾರು 300 ಮನೆಗಳಿಗೆ ಸೌರಶಕ್ತಿ ಘಟಕ ಅಳವಡಿಸಲು ನೆರವು ನೀಡುತ್ತೇನೆ. ಎಸ್‌ಕೆಡಿಆರ್‌ಡಿಪಿ ಚೆನ್ನಾಗಿ ಕೆಲಸ ಮಾಡುತ್ತಿದೆ. ಹೀಗಾಗಿ ಶೌಚಾಲಯಗಳ ಯಶಸ್ವಿ ಅನುಷ್ಠಾನದ ಉಸ್ತುವಾರಿಯನ್ನು ಎಸ್‌ಕೆಡಿಆರ್‌ಡಿಪಿಯೇ ನೋಡಿಕೊಳ್ಳಬೇಕು. ಈ ಬಗ್ಗೆ ಯೋಜನೆ ಸಿದ್ಧಪಡಿಸಿ ಕೊಡಿ' ಎಂದು ಯೋಜನೆಯ ಜಿಲ್ಲಾ ಮುಖ್ಯಸ್ಥ ವಸಂತ ಸಾಲಿಯಾನ್ ಅವರಿಗೆ ತಿಳಿಸಿದರು.

## 4500 ಸೇವೆ ಬೆರಳಂಚಿನಿಂದ ಮಾಯ | ಯೋಜನೆ ಮರೆತ ರಾಜ್ಯ ಸರ್ಕಾರ

# ವರವಾಗಬೇಕಿದ್ದ ಮೊಬೈಲ್ ಒನ್ ಸೇವೆಗೆ ಗರ

■ **ರಾಜೀವ ಹೆಗಡೆ** ಬೆಂಗಳೂರು

ಇಡೀ ದೇಶ ನಗದು ರಹಿತ ಆರ್ಥಿಕತೆಯತ್ತ ಹೊರಳುತ್ತಿರುವ ಈ ಹೊತ್ತಿನಲ್ಲಿ ಕರ್ನಾಟಕ ಸರ್ಕಾರ 2014ರಲ್ಲೇ 'ಬೆರಳಂಚಿನಲ್ಲಿ ಸರ್ಕಾರಿ ಸೇವೆಗಳು' ಎಂಬ ಘೋಷವಾಕ್ಯದೊಂದಿಗೆ ಆರಂಭಿಸಿದ್ದ 'ಕರ್ನಾಟಕ ಮೊಬೈಲ್ ಒನ್' ಸೇವೆ ವರವಾಗಬೇಕಿತ್ತು. ಆದರೆ, ಇ-ಆಡಳಿತ ಸಚಿವಾಲಯದ ನಿರ್ಲಕ್ಷ್ಯದಿಂದಾಗಿ ಡಿಜಿಟಲ್ ಎಕಾನಮಿ ವಿಚಾರದಲ್ಲಿ ದೇಶಕ್ಕೇ ಮಾದರಿಯಾಗುವ ಅವಕಾಶವನ್ನು ರಾಜ್ಯ ಕಳೆದುಕೊಳ್ಳುತ್ತಿದೆ.

mobileone
Governance at your fingertips

ಪೇಟಿಎಂ, ಫ್ರೀಚಾರ್ಜ್ ಮತ್ತಿತರ ಆನ್‌ಲೈನ್ ವ್ಯವಹಾರಗಳು ಅಂಬೆಗಾಲಿಡುವ ಸಂದರ್ಭದಲ್ಲೇ ವಿಶ್ವದ ಅತಿದೊಡ್ಡ ಇ-ಸೇವೆ ಆಗಲಿದೆ ಎಂಬ ನಿರೀಕ್ಷೆ ಮೂಡಿಸಿದ್ದ ಕರ್ನಾಟಕ ಮೊಬೈಲ್ ಒನ್ ಸೇವೆ, ಸದ್ಯ ನೆಪ ಮಾತ್ರಕ್ಕೆ ಕಾರ್ಯ ನಿರ್ವಹಿಸುತ್ತಿದ್ದು ಜನರ ನೆನಪಿನಿಂದಲೇ ಮಾಯವಾಗುತ್ತಿದೆ!

ರಾಷ್ಟ್ರಪತಿ ಪ್ರಣವ್ ಮುಖರ್ಜಿ 2014ರ ಡಿ.8ರಂದು ಯೋಜನೆಗೆ ಚಾಲನೆ ನೀಡಿದಾಗ ಇದರಲ್ಲಿ ಬರೋಬ್ಬರಿ 4100 ಸೇವೆಗಳಿದ್ದವು. ಶೀಘ್ರ 4500ಕ್ಕೂ ಅಧಿಕ ಸೇವೆಗಳನ್ನು ಸೇರಿಸುವುದಾಗಿ ಸರ್ಕಾರ ಹೇಳಿತ್ತು.

➊ ಪುಟ 2




### ಕರ್ನಾಟಕ ಮೊಬೈಲ್ ಒನ್ ಅಂಕಿ ಅಂಶ
(2014-2016)

- » ಮೊಬೈಲ್ ಒನ್‌ಗೆ ಬಂದಿರುವ ಹಿಟ್ಸ್-1.99 ಕೋಟಿ
- » ಒಟ್ಟು ವ್ಯವಹಾರಗಳು-8.71 ಲಕ್ಷ
- » ಒಟ್ಟು ಆರ್ಥಿಕ ವ್ಯವಹಾರಗಳು-7.51 ಲಕ್ಷ
- » ವಹಿವಾಟು- 8.21 ಕೋಟಿ ರೂ.
- » ಅಪ್ಲಿಕೇಷನ್ ಡೌನ್ ಲೋಡ್-2.41 ಲಕ್ಷ

### ನಗದು ರಹಿತ ಸಲೀಸಾಗ್ತಿತ್ತು!

ಇಡೀ ದೇಶ ನಗದು ರಹಿತ ವ್ಯವಹಾರದತ್ತ ಹೆಜ್ಜೆ ಇಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಈ ಯೋಜನೆ ಘೋಷಣೆ ಸಂದರ್ಭದಲ್ಲಿ ಮೋದಿ ಹೇಳುತ್ತಿರುವುದನ್ನು ನಾವು ಮಾಡಿ ತೋರಿಸಿದ್ದೇವೆ ಎಂದು ವರ್ಷದ ಹಿಂದೆಯೇ ಮುಖ್ಯಮಂತ್ರಿ ಹೇಳಿದ್ದರು. ಒಂದೊಮ್ಮೆ ಸರ್ಕಾರವು ಈ ನಿಟ್ಟಿನಲ್ಲಿ ಅಂದಿನಿಂದಲೂ ಸ್ಪಷ್ಟ ಗುರಿಯೊಂದಿಗೆ ಹೆಜ್ಜೆ ಇರಿಸಿದ್ದರೆ ನಗದು ರಹಿತ ವ್ಯವಹಾರವು ಕರ್ನಾಟಕದಲ್ಲಿ ಜನರಿಗೂ ಚಿರಪರಿಚಿತವಾಗುತ್ತಿತ್ತು. ಜತೆಗೆ ನೋಟು ರದ್ದತಿ ಸಂದರ್ಭದಲ್ಲಿ ಸಾಕಷ್ಟು ಗೋಳು ಕೂಡ ಕಡಿಮೆಯಾಗುತ್ತಿತ್ತು. ರಾಜಕೀಯ ಹಾಗೂ ಆಡಳಿತಾತ್ಮಕ ವಿಚಾರದಲ್ಲಿ ಮಾತಿನ ಜತೆಗೆ ಕ್ರಿಯೆಯಲ್ಲಿಯೂ ಕೇಂದ್ರ ಸರ್ಕಾರಕ್ಕಿಂತ ನಾಲ್ಕೈದು ಹೆಜ್ಜೆ ಮುಂದಿರಬಹುದಿತ್ತು. ಏಷ್ಯಾದ ಐಟಿ ರಾಜಧಾನಿ ಎಂದುಕೊಂಡು ಬೀಗುವುದಕ್ಕೆ ಇನ್ನಷ್ಟು ಅರ್ಥವೂ ಬರುತ್ತಿತ್ತು. ಸದ್ಯಕ್ಕೆ 25 ಆನ್‌ಲೈನ್ ವ್ಯವಹಾರಕ್ಕೆ ಸಂಬಂಧಿಸಿದ ಸೇವೆಗಳಿದ್ದು, ಅದರಲ್ಲಿ ವಿದ್ಯುತ್, ನೀರು ಹಾಗೂ ಕೆಲವೇ ಮೊಬೈಲ್ ಬಿಲ್‌ಗಳ ಪಾವತಿಯಷ್ಟೇ ಸಾಧ್ಯವಾಗುತ್ತಿದೆ.

ವಿಜಯವಾಣಿ 20/12/2016 Page No 2

# ವರವಾಗಬೇಕಿದ್ದ ಮೊಬೈಲ್ ಒನ್ ಸೇವೆಗೆ ಹಿಡಿದಿದೆ ಗರ

ಮೊದಲ ಪುಟದಿಂದ...

ಆದರೆ ಸದ್ಯ 650 ಸೇವೆಗಳಿದ್ದು, ಆ ಪೈಕಿ 450 ಸಕಾಲ ಸೇವೆಗಳಾಗಿವೆ ಎಂದು ಇ-ಆಡಳಿತ ಸಚಿವಾಲಯವೇ ಹೇಳಿಕೊಳ್ಳುತ್ತಿದೆ. ವಾಸ್ತವದಲ್ಲಿ ಸಕಾಲ ಹೊರತುಪಡಿಸಿ 21 ಪ್ರಮುಖ ಸೇವಾ ವಿಭಾಗಗಳಲ್ಲಿ ಕೇವಲ 80 ಸೇವೆಗಳಷ್ಟೇ ದೊರೆಯುತ್ತಿವೆ.

**ವ್ಯವಸ್ಥೆಯಿಲ್ಲದ ಇ-ಆಡಳಿತ:** ಮೊಬೈಲ್ ಒನ್ ಪ್ಲ್ಯಾಟ್‌ಫಾರ್ಂನಲ್ಲಿ ಲಭ್ಯವಿರುವ 22 ಪ್ರಮುಖ ಸೇವಾ ವಿಭಾಗಗಳಲ್ಲಿ ದೈನಂದಿನ ಸರ್ಕಾರಿ ಸವಲತ್ತು, ಬ್ಯಾಂಕಿಂಗ್, ಪೊಲೀಸ್, ಆರೋಗ್ಯ, ಟೆಲಿಕಾಂ, ಸಾರಿಗೆ, ಉದ್ಯೋಗ, ಶಿಕ್ಷಣ, ಕೃಷಿ, ತೆರಿಗೆಗಳು ಸೇರಿವೆ. ಆದರೆ ಇದರಲ್ಲಿ ವಿದ್ಯುತ್ ಬಿಲ್ ಪಾವತಿ, ಕೆಲ ಖಾಸಗಿ ವೆಬ್‌ಸೈಟ್‌ಗಳ ಮೂಲಕ ಹುಯಿಗಾಡಿ ಟಿಕೆಟ್ ಬುಕಿಂಗ್, ಪ್ರಿಪೇಡ್ ಮೊಬೈಲ್ ಬಿಲ್ ಪಾವತಿ, ಪೊಲೀಸ್ ಹೊರತುಪಡಿಸಿ ಉಳಿದವು ಬಹುತೇಕ ನಿಷ್ಕ್ರಿಯವಾಗಿವೆ.

ಕೃಷಿಕರ ಜೀವನವನ್ನೇ ಬದಲಿಸುವ ತಂತ್ರಜ್ಞಾನ ಎಂದು ಉದ್ಘಾಟನೆ ಸಂದರ್ಭದಲ್ಲಿ ಮುಖ್ಯಮಂತ್ರಿ ಬಣ್ಣಿಸಿದ್ದರು. ಆದರೆ ಬೆಳೆ ಮಾಹಿತಿ ಪಡೆಯಲು ಕೃಷಿಕರಿಗೆ ನೋಂದಣಿ ಅವಕಾಶವನ್ನೇ ನೀಡಿಲ್ಲ. ಇನ್ನು ನೇರವಾಗಿ ಮಾಹಿತಿ ಪಡೆಯಲು ಹೋದರೆ ಇನ್ ವ್ಯಾಲಿಡ್ ಎಂಬ ಸಂದೇಶ ಬರುತ್ತಿದೆ. ಹವಾಮಾನ ಇಲಾಖೆಯ ದೈನಂದಿನ ಸಂದೇಶಕ್ಕಷ್ಟೇ ಸೇವೆ ಸೀಮಿತವಾಗಿದೆ.

ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಮೆಟ್ರೋ ಹಣ ಪಾವತಿ ಹಾಗೂ ಮಾಹಿತಿ ಪಡೆಯಲು ಅವಕಾಶವಿದ್ದರೂ ಸಾಧ್ಯವಾಗುತ್ತಿಲ್ಲ. ಇನ್ನೊಂದು ವಿಚಿತ್ರವೆಂದರೆ ಲಭ್ಯವಿಲ್ಲದ ಸೇವೆಗಳು ಕೂಡ ಇದರಲ್ಲಿ ಸೇರಿಕೊಂಡಿವೆ. ಉದಾಹರಣೆಗೆ ಆ್ಯಪ್ ಹೊರತಾದ ಕ್ಯಾಬ್ ಬುಕಿಂಗ್ ತೆಗೆದುಕೊಳ್ಳುವುದನ್ನು ಒಂದು ವರ್ಷದ ಹಿಂದೆಯೇ ಓಲಾ ಕೈ ಬಿಟ್ಟಿದೆ. ಆದರೆ ಮೊಬೈಲ್ ಒನ್‌ನಲ್ಲಿ ಇಂದಿಗೂ ಅದು ಲಭ್ಯವಿದೆ! ಕಾನೂನು ವಿಭಾಗದ 'ವಕೀಲ್ ಸರ್ಚ್' ನಲ್ಲಿ ಏನನ್ನೂ 'ಸರ್ಚ್' ಮಾಡಲು ಗ್ರಾಹಕರಿಗೆ ಸಾಧ್ಯವಾಗುತ್ತಿಲ್ಲ. ತೆರಿಗೆ ವಿಭಾಗದಲ್ಲಿ 4 ಪ್ರತ್ಯೇಕ ಸೇವೆಯನ್ನು ಒದಗಿಸಲಾಗಿದೆ. ಆದರೆ ತೆರಿಗೆ ಮರು ಪಾವತಿಯ ಮಾಹಿತಿಯನ್ನೂ ನೋಡಲಾಗುವುದಿಲ್ಲ. ಬ್ಯಾಂಕಿಂಗ್ ಮಾಹಿತಿ ಸೇರಿಸಲು ನೋಂದಣಿ ಮಾಡಲು ಮುಂದಾದರೆ ಕೆಲ ಜಿಲ್ಲೆಗಳು ಸೇರಿಕೊಂಡಿಲ್ಲ, ಶಾಖೆಗಳ ವಿವರವೂ ಬರುವುದಿಲ್ಲ.

ಬಿ2ಸಿ ವಿಭಾಗದಲ್ಲಿ 22 ಸೇವೆಗಳನ್ನು ತೋರಿಸಿದ್ದರೂ ಸಂಪೂರ್ಣ ಮೊಬೈಲ್ ಒನ್‌ನಲ್ಲಿರುವ ಎಲ್ಲ ಖಾಸಗಿ ಸಂಸ್ಥೆಗಳನ್ನು ಅಲ್ಲಿಗೆ ಸೇರಿಸಿಕೊಂಡು ಬಿ2ಸಿ ಎಂದು ಬಿಂಬಿಸಲಾಗುತ್ತಿದೆ. ಶಿಕ್ಷಣ ವಿಭಾಗದಲ್ಲಿ ದ್ವಿತೀಯ ಪಿಯು ಮರು ಮೌಲ್ಯಮಾಪನ ಅರ್ಜಿಗೆ ಅವಕಾಶ ನೀಡಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ 2014ರ ನಂತರ ಯಾವುದೇ ಅಪ್‌ಡೇಟ್ ಆಗಿಲ್ಲ.

**ಸರ್ಕಾರವನ್ನೇ ಮರೆತ ಸಚಿವಾಲಯ:** ಸಾಮಾನ್ಯ ಜನರಿಗೆ ಲಾಭವಾಗುವಂತಹ ಸರ್ಕಾರಿ ಸೇವೆ ಹಾಗೂ ಸಂಸ್ಥೆಗಳನ್ನು ಮೊಬೈಲ್ ಒನ್‌ಗೆ ಸೇರಿಸುವ ಕೆಲಸವನ್ನು ಇ-ಆಡಳಿತ ಇಲಾಖೆ ಮಾಡಬಹುದಿತ್ತು. ಮಾನವ ಸಂಪನ್ಮೂಲ ಹಾಗೂ ಉದ್ಯೋಗಕ್ಕೆ ಸಂಬಂಧಿಸಿ 'ಬಾಬಾ ಜಾಬ್ಸ್' ವೆಬ್‌ಸೈಟ್ ಲಿಂಕ್ ಹೊರತು ಪಡಿಸಿ ರಾಜ್ಯ ಸರ್ಕಾರದ ಕೌಶಲ ತರಬೇತಿ ಕೇಂದ್ರ, ನಾನಾ ವಿಶ್ವವಿದ್ಯಾಲಯಗಳ ಪ್ಲೇಸ್‌ಮೆಂಟ್ ಸೆಲ್‌ನ್ನು ಸೇರಿಸುವಂತಹ ಕಾಳಜಿಯನ್ನು ತೋರಿಸಿಲ್ಲ. ಆರೋಗ್ಯ ಕ್ಷೇತ್ರದಲ್ಲಿ 4 ಖಾಸಗಿ ಸಂಸ್ಥೆಗಳಲ್ಲಿ ಚಿಕಿತ್ಸೆಗೆ ಅವಕಾಶ ಕೇಳಲು ಮನವಿ ಪತ್ರ ನೀಡಲಾಗಿದ್ದು, ಯಾವೊಂದು ಸರ್ಕಾರಿ ಆಸ್ಪತ್ರೆ ಅಥವಾ ಅನುದಾನಿತ ಆಸ್ಪತ್ರೆಗಳ ಬಗ್ಗೆ ಮಾಹಿತಿ ನೀಡಿಲ್ಲ.

### ಇನ್ನೂ ಸೇವಾ ಶುಲ್ಕ ವಸೂಲಿ

ಖಾಸಗಿ ಸಂಸ್ಥೆಗಳೆ ಸೇವಾ ಶುಲ್ಕ ಪಡೆಯದೇ ಸೇವೆ ಒದಗಿಸುತ್ತಿವೆ. ಆದರೆ ಮೊಬೈಲ್ ಒನ್‌ನಲ್ಲಿ ಶೇ.1 ಸೇವಾ ಶುಲ್ಕ ಕಡಿತವಾಗುತ್ತದೆ. ಖಾಸಗಿ ಸಂಸ್ಥೆಗಳಲ್ಲಿ ಆಯಾ ಬ್ಯಾಂಕ್‌ಗಳ ಗೇಟ್‌ವೇ ಮೂಲಕ ಹಣ ಪಾವತಿಯಾದರೆ ಇಲ್ಲಿ ಪೇ-ಗೌ ಗೇಟ್‌ವೇ ಮೂಲಕ ಆಗುತ್ತಿದೆ. ವಿಚಿತ್ರವೆಂದರೆ ಕೇಂದ್ರ ಸರ್ಕಾರವು ಇತ್ತೀಚೆಗೆ ಆನ್‌ಲೈನ್ ವ್ಯವಹಾರಕ್ಕೆ ಸೇವಾಶುಲ್ಕದಿಂದ ವಿನಾಯಿತಿ ನೀಡಿದ್ದರೂ ಇಲ್ಲಿ ಶುಲ್ಕ ವಸೂಲಿ ಮುಂದುವರಿದಿದೆ.

### ಸುರಕ್ಷತೆಯ ಬಗ್ಗೆ ಪ್ರಶ್ನೆ?

ಮೊಬೈಲ್ ಒನ್ ಸುರಕ್ಷತೆ ಬಗೆಗೂ ಪ್ರಶ್ನೆ ಉದ್ಭವಿಸಿದೆ. ನೋಂದಣಿಯಾಗಿರುವ ಮೊಬೈಲ್‌ಗೆ ಒಟಿಪಿ ಬರುವುದನ್ನು ಹೊರತುಪಡಿಸಿದರೆ ಇನ್ಯಾವುದೇ ಪಾಸ್‌ವರ್ಡ್ ಬದಲಾವಣೆಗೆ ಅವಕಾಶವನ್ನೇ ನೀಡಲಾಗಿಲ್ಲ. ಇದರ ಜತೆಗೆ ಬ್ಯಾಂಕಿಂಗ್ ವಿಭಾಗದಲ್ಲಿ ನೋಂದಣಿ ಮಾಡಲು ಕೆಲ ಬ್ಯಾಂಕ್ ಪುಟಗಳ ಮೇಲೆ ಕ್ಲಿಕ್ ಮಾಡಿದಾಗ 'ಅನ್‌ಟ್ರಸ್ಟೆಡ್ ಯುಆರ್‌ಎಲ್' ಎಂಬ ಸಂದೇಶ ಬರುತ್ತಿದೆ.

### ಖಾಸಗಿ ಸಂಸ್ಥೆ ಮೀರಿಸಬಹುದು

ಮೊಬೈಲ್ ಒನ್ ಸಮರ್ಪಕವಾಗಿ ಬಳಕೆಯಾದರೆ ರಾಜ್ಯದ ಆದಾಯ ಸಂಗ್ರಹಕ್ಕೆ ದೊಡ್ಡ ವೇದಿಕೆಯನ್ನಾಗಿಸಿಕೊಳ್ಳಬಹುದು. ಸರ್ಕಾರದ ಸಾಕಷ್ಟು ಸೇವೆಗಳಿಗೆ ಈಗ ಖಾಸಗಿ ಆನ್‌ಲೈನ್ ಪ್ಲ್ಯಾಟ್‌ಫಾರ್ಂ ಮೂಲಕ ಹಣ ಪಾವತಿಸಬಹುದಾಗಿದೆ. ಇದಕ್ಕೆ ಮೊಬೈಲ್ ಒನ್ ಬಳಸಿಕೊಂಡರೆ ವಹಿವಾಟು ಗಣನೀಯವಾಗಿ ಏರಿಕೆಯಾಗಲಿದೆ. ಮೊಬೈಲ್ ಒನ್ ಬಗ್ಗೆ ಪರಿಣಾಮಕಾರಿಯಾಗಿ ಜಾಹೀರಾತು ನೀಡಿದರೆ ಖಾಸಗಿ ಸಂಸ್ಥೆಗಳಿಗೆ ಸೆಡ್ಡು ಹೊಡೆಯಬಹುದು.